# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
## ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ:3697/10/31/2017(SB–3)**

**ದಿನಾಂಕ: 30–01–2021.**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

ಶ್ರೀ ಸಿ.ಸಿ ಸಿದ್ದಯ್ಯ ಬಿನ್ ಲೇಟ್ ಚಿಕ್ಕಹೊನ್ನಯ್ಯ,
ನಂ.18, ಬೂಡಬಂಡೆ, ಆಂಜನೇಯಸ್ವಾಮಿ ಮುಖ್ಯರಸ್ತೆ,
1ನೇ ಅಡ್ಡರಸ್ತೆ, ಶ್ರೀಗಂಧನಗರ,
ಹೆಗ್ಗನಹಳ್ಳಿ ಕ್ರಾಸ್,
ಬೆಂಗಳೂರು–560 091.

**ಆದೇಶ**

ಶ್ರೀ ಸಿದ್ದಯ್ಯ ರವರ ದೂರಿನ ಸಾರಾಂಶವೇನೆಂದರೆ ಅವರು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ್ದು, ಅವರ ಮಗಳಾದ ಶ್ರೀಮತಿ ಪುಷ್ಪಲತ ಹಾಗೂ ಅವರ ಪಕ್ಕದ ಮನೆಯ ನಿವಾಸಿ ಶ್ರೀ ಗಂಗಯ್ಯ ಅವರಿಗೂ ಆಸ್ತಿಯ ವಿಚಾರವಾಗಿ ಗಲಾಟೆ ನಡೆಯುತ್ತಿದ್ದು, ದಿನಾಂಕ. 20.06.2017 ರಂದು ಶ್ರೀ ವೀರಪ್ಪ, ಮುಖ್ಯ ಪೇದೆ ರವರು ತನ್ನ ಮತ್ತು ತನ್ನ ಕುಟುಂಬದವರ ಮೇಲೆ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ತಿಳಿಸಿ ವಿಚಾರಣೆಗೆ ಬರಬೇಕೆಂದು ಹೇಳಿದ್ದು, ತನ್ನ ಮಗಳು ಇದರ ಬಗ್ಗೆ ತನ್ನ ತಂದೆ ಶ್ರೀ ಸಿ.ಸಿ ಸಿದ್ದಯ್ಯರವರಿಗೆ ತಿಳಿಸಿರುತ್ತಾರೆ. ಶ್ರೀ ಸಿ.ಸಿ ಸಿದ್ದಯ್ಯ ಹಾಗೂ ಕುಟುಂಬದವರು ಠಾಣೆಗೆ ಹೋದಾಗ ಶ್ರೀ ಹರೀಶ್ ಇನ್ಸ್‌ಪೆಕ್ಟರ್, ಶ್ರೀ ವಿ.ಕಿರಣ್ ಸಬ್ ಇನ್ಸ್‌ಪೆಕ್ಟರ್, ಶ್ರೀ ದುರ್ಗರಾಜ್ ಎ.ಎಸ್.ಐ, ಶ್ರೀ ವೀರಪ್ಪ ಹೆಡ್ ಕಾನ್ಸ್‌ಸ್ಟೇಬಲ್ ರವರುಗಳು ಹಾಗೂ ಇನ್ನೂ ಎರಡರಿಂದ ಮೂರು ಪೊಲೀಸ್ ಪೇದೆಗಳ ಜೊತೆ ಸೇರಿ ತನ್ನನ್ನು ಬೂಟು ಕಾಲಿನಿಂದ ಒದ್ದು ದೈಹಿಕವಾಗಿ ಹಲ್ಲೆ ಮಾಡಿ, ತನ್ನಿಂದ ಯಾವುದೋ ಒಂದು ಪತ್ರಕ್ಕೆ ಸಹಿ ತೆಗೆದುಕೊಂಡು, ತನ್ನ ಮತ್ತು ತನ್ನ ಕುಟುಂಬದವರ ಮೇಲೆ ಹಲವಾರು ಪ್ರಕರಣಗಳನ್ನು ದಾಖಲಿಸುವುದಾಗಿ ಬೆದರಿಕೆ ಹಾಕಿರುವ ಕಾರಣ ಅವರ ವಿರುದ್ಧ ಸೂಕ್ತ ಕ್ರಮ ಜರುಗಿಸಿ ತನಗೆ ನ್ಯಾಯ ಒದಗಿಸಿಕೊಡಬೇಕೆಂದು ಪ್ರಾರ್ಥಿಸಿರುತ್ತಾರೆ.

ಈ ದೂರಿನ ಪ್ರತಿಯನ್ನು ಉಪ ಪೊಲೀಸ್ ಆಯುಕ್ತರು, ಪಶ್ಚಿಮ ವಿಭಾಗ, ಬೆಂಗಳೂರು ರವರಿಗೆ ವರದಿಗಾಗಿ ಕಳುಹಿಸಿದ್ದು, ಅದರಂತೆ ಸದರಿಯವರ ವರದಿಯೊಂದಿಗೆ ಸಹಾಯಕ ಪೊಲೀಸ್ ಆಯುಕ್ತರು,

ವಿಜಯನಗರ ಉಪ-ವಿಭಾಗ, ಬೆಂಗಳೂರು ರವರ ವರದಿ ಹಾಗೂ ಇನ್ನಿತರೇ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ದೂರುದಾರರು ಅವರ ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ. ಆಯೋಗವು ಸದರಿ ವರದಿ ಹಾಗೂ ಅಭಿಪ್ರಾಯವನ್ನು ಪರಿಶೀಲಿಸಿ, ದೂರುದಾರರ ಅಭಿಪ್ರಾಯದ ಪ್ರತಿಯನ್ನು ಉಪ ಪೊಲೀಸ್ ಆಯುಕ್ತರು, ಪಶ್ಚಿಮ ವಿಭಾಗ, ಬೆಂಗಳೂರು ರವರಿಗೆ ಕಳುಹಿಸಿ ಅದರ ಬಗ್ಗೆ ಕೂಲಕಂಷವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಆದೇಶಿಸಿದ್ದು, ಅದರಂತೆ ಉಪ ಪೊಲೀಸ್ ಆಯುಕ್ತರು, ಪಶ್ಚಿಮ ವಿಭಾಗ, ಬೆಂಗಳೂರು ರವರ ವರದಿಯೊಂದಿಗೆ ಸಹಾಯಕ ಪೊಲೀಸ್ ಆಯುಕ್ತರು, ಕೆಂಗೇರಿಗೇಟ್ ಉಪ-ವಿಭಾಗ, ಬೆಂಗಳೂರು ರವರ ವರದಿ ಹಾಗೂ ಅದರ ಅನುಬಂಧಗಳನ್ನು ಸಲ್ಲಿಸಿರುತ್ತಾರೆ. ಆಯೋಗವು ದೂರರ್ಜಿ, ವರದಿ ಹಾಗೂ ಅನುಪಾಲನಾ ವರದಿಯನ್ನು ಪರಿಶೀಲಿಸಿ ಎ.ಸಿ.ಪಿ, ವಿಜಯನಗರ ಉಪವಿಭಾಗ ಹಾಗೂ ಎ.ಸಿ.ಪಿ, ಕೆಂಗೇರಿಗೇಟ್ ಉಪವಿಭಾಗ, ಬೆಂಗಳೂರು ರವರುಗಳು ಸಲ್ಲಿಸಿರುವ ವರದಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಿರುವುದಿಲ್ಲ. ಆದುದರಿಂದ ವರದಿಗಳನ್ನು ಒಪ್ಪದೇ ಆಯೋಗವು ಈ ಪ್ರಕರಣವನ್ನು ಆಯೋಗದ ತನಿಖಾ ವಿಭಾಗದಿಂದ ವಿಚಾರಣೆ ಮಾಡಲು ಸೂಚಿಸಲಾಗಿರುತ್ತದೆ. ಅದರಂತೆ ಆಯೋಗದ ತನಿಖಾ ವಿಭಾಗದವರು ವರದಿಯನ್ನು ಸಲ್ಲಿಸಿರುತ್ತಾರೆ. ದೂರರ್ಜಿ, ವರದಿಗಳು, ಅಭಿಪ್ರಾಯ ಹಾಗೂ ಆಯೋಗದ ಪ್ರಭಾರ ಅಡಿಷನಲ್ ಡೈರೆಕ್ಟರ್ ಜನರಲ್ ರವರು ಸಲ್ಲಿಸಿರುವ ತನಿಖಾ ವರದಿಯನ್ನು ಪರಿಶೀಲಿಸಲಾಗಿ, ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎನ್.ಸಿ.ಆರ್ ಸಂಖ್ಯೆ.676/2017 ರ ಪ್ರಕರಣದಲ್ಲಿ ದೂರುದಾರರ ಮೇಲೆ ಯಾವ ಆಧಾರದ ಮೇಲೆ ತನಿಖೆ ಕೈಗೊಳ್ಳಲಾಗಿದೆ ಹಾಗೂ ದೂರುದಾರರಾದ ಶ್ರೀ ಸಿ.ಸಿ ಸಿದ್ದಯ್ಯ ರವರ ಮೇಲೆ ಹಲ್ಲೆ ಮಾಡಿರುವುದು ಕಾನೂನು ಬಾಹಿರವಾಗಿದ್ದು, ಇದರ ಬಗ್ಗೆ ಸಮಜಾಯಿಷಿ ನೀಡಲು, ಕಲಂ 16ರ ಮಾನವ ಹಕ್ಕುಗಳ ರಕ್ಷಣಾ ಕಾಯ್ದೆ 1993ರ ಅಡಿಯಲ್ಲಿ ಅಂದಿನ ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಯ 1) ಶ್ರೀ ಹರೀಶ್ ಪಿ.ಐ, 2) ಶ್ರೀ ಕಿರಣ್ ಪಿ.ಎಸ್.ಐ, 3) ಶ್ರೀ ದುರ್ಗರಾಜ್ ಎ.ಎಸ್.ಐ(ಹಾಲಿ ನಿವೃತ್ತ), 4) ಶ್ರೀ ವೀರಪ್ಪ ಎನ್.ಆರ್, ಹೆಡ್ ಕಾನ್ಸ್‌ಸ್ಟೇಬಲ್(ಹಾಲಿ ನಿವೃತ್ತ) ರವರುಗಳಿಗೆ ನೋಟೀಸ್ ಜಾರಿ ಮಾಡಲಾಗಿದ್ದು, ಅದರಂತೆ ದೂರುದಾರರಿಗೂ ಆಯೋಗಕ್ಕೆ ಹಾಜರಾಗುವಂತೆ ತಿಳಿಸಿದ್ದು, ದೂರುದಾರರು ಹಾಗೂ ಪೊಲೀಸ್ ಅಧಿಕಾರಿಗಳು ಆಯೋಗದ ಮುಂದೆ ತಮ್ಮ ಹೇಳಿಕೆಗಳನ್ನು ನೀಡಿರುತ್ತಾರೆ. ಹಾಗೂ ಗಾಯಾಳು ಶ್ರೀ ಸಿದ್ದಯ್ಯ ರವರ ದಿನಾಂಕ.20.06.2017ರ ವೈದ್ಯಕೀಯ ಪರೀಕ್ಷೆಯ ವರದಿಯನ್ನು ನೀಡಲು ಸೂಚಿಸಲಾಗಿದ್ದು, ಅದರಂತೆ ಆಯೋಗಕ್ಕೆ ಸಲ್ಲಿಸಿರುತ್ತಾರೆ. ಹಾಗೂ ಆಯೋಗದ ಡಿ.ವೈ.ಎಸ್.ಪಿ ಶ್ರೀ ಮಂಜುನಾಥ್ ರವರಿಗೆ ಘಟನೆ ನಡೆದ ದಿನಾಂಕದ ಎಸ್.ಹೆಚ್.ಡಿ ಹಾಗೂ ಶ್ರೀ ದುರ್ಗಾರಾಜ್

ಎ.ಎಸ್.ಐ ರವರಿಗೆ ಈ ದೂರಿಗೆ ಸಂಬಂಧಪಟ್ಟಂತೆ ದಿನಾಂಕ.20.06.2017ರಂದು ಬೆಳಿಗ್ಗೆ 10.30 ರಿಂದ 11.00 ಗಂಟೆ ಸುಮಾರಿಗೆ ಪೊಲೀಸ್ ಕಂಟ್ರೋಲ್ ರೂಮ್ ನಿಂದ ವೈಯರ್‌ಲೆಸ್‌ನಿಂದ ಯಾವುದಾದರೂ ಸಂದೇಶ ರವಾನಿಸಿರುವ ಬಗ್ಗೆ ಪರಿಶೀಲಿಸಲು ಹೇಳಲಾಗಿ ಅವರು ಈ ಬಗ್ಗೆ ಆಯೋಗಕ್ಕೆ ಡಿ.ವೈ.ಎಸ್.ಪಿ ರವರು ವರದಿ ಸಲ್ಲಿಸಿರುತ್ತಾರೆ.

ಉಪ ಪೊಲೀಸ್ ಆಯುಕ್ತರು, ಪಶ್ಚಿಮ ವಿಭಾಗ, ಬೆಂಗಳೂರು ಅವರ ವರದಿಯೊಂದಿಗೆ ಸಹಾಯಕ ಪೊಲೀಸ್ ಆಯುಕ್ತರು, ವಿಜಯನಗರ ಉಪವಿಭಾಗ, ಬೆಂಗಳೂರು ಅವರು ಸಲ್ಲಿಸಿರುವ ಸಾರಾಂಶವೇನೆಂದರೆ ಶ್ರೀ ಗಂಗಯ್ಯನವರು ನೀಡಿರುವ ದೂರಿನ ಮೇರೆಗೆ ಎನ್.ಸಿ.ಆರ್ ನಂ.676/2017 ದಾಖಲಾಗಿದ್ದು, ಸದರಿ ಪ್ರಕರಣದ ವಿಚಾರಣೆಗಾಗಿ ದೂರುದಾರರಾದ ಶ್ರೀ ಸಿ.ಸಿ. ಸಿದ್ದಯ್ಯ ಮತ್ತು ಅವರ ಸಂಬಂಧಿಕರನ್ನು ಠಾಣೆಗೆ ಕರೆಸಿದ್ದು, ವಿಚಾರಣೆಗೆ ಕರೆಸಿರುತ್ತಾರೆಂಬ ಕಾರಣಕ್ಕಾಗಿ ದೂರುದಾರರು ಈ ಮೊದಲು ತಾನು ಕೂಡ ಶಿಸ್ತಿನ ಇಲಾಖೆಯಾದ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತನಾಗಿರುತ್ತೇನೆಂಬುದನ್ನು ಮರೆತು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕೂಗಾಡಿ, ಕರ್ತವ್ಯ ನಿರ್ವಹಣೆಗೆ ತೊಂದರೆ ಮಾಡಿದ್ದು, ಆ ನಂತರ ದೂರುದಾರರಿಗೆ ಅವರ ತಪ್ಪಿನ ಅರಿವಿಗಾಗಿ ದಿನಾಂಕ.20.06.2017ರ ಪತ್ರದಲ್ಲಿ ಪೊಲೀಸರ ಬಳಿ ಕ್ಷಮಾಪಣೆ ಕೋರಿದ್ದಾರೆಂದು ವರದಿಯಲ್ಲಿ ಹೇಳಿರುತ್ತಾರೆ.

ಮೇಲ್ಕಾಣಿಸಿದ ವರದಿಯ ಬಗ್ಗೆ, ದೂರುದಾರರು ತಮ್ಮ ಅಭಿಪ್ರಾಯದಲ್ಲಿ ತನಗೆ 65 ವರ್ಷ ಹಾಗೂ ತನ್ನ ಹೆಂಡತಿಗೆ 62 ವರ್ಷ ವಯಸ್ಸಾಗಿದ್ದು, ಇಬ್ಬರನ್ನು ಠಾಣೆಗೆ ಕರೆಸಿ ತನ್ನನ್ನು ಮಾತನಾಡಲು ಬಿಡದೇ ತನ್ನ ಮೇಲೆ ಕೂಗಾಡಿ ಇನ್ಸ್‌ಪೆಕ್ಟರ್ ಛೇಂಬರ್‌ನಲ್ಲಿ ಶ್ರೀ ಹರೀಶ್ ಎಂ.ಆರ್ ಪೊಲೀಸ್ ಇನ್ಸ್‌ಪೆಕ್ಟರ್ ರವರು ತನ್ನ ಮೇಲೆ ಹಲ್ಲೆ ಮಾಡಿದ್ದು, ನಂತರ ಹೊರಗಡೆ ಅಪರಾಧಿಗಳನ್ನು ಕೂಡಿ ಹಾಕುವ ರೂಮಿನ ಹತ್ತಿರ ಪ್ರಾಣಿಗಳಂತೆ ಎಳೆದುಕೊಂಡು ಹೋಗಿ ಬೂಟು ಕಾಲಿನಿಂದ ಒದ್ದು, ತನ್ನ ಕಪಾಳಕ್ಕೆ ಹೊಡೆದಾಗ ತನಗೆ ಪ್ರಜ್ಞೆ ತಪ್ಪಿದ್ದು, ನಂತರ ತನಗೆ ಪ್ರಜ್ಞೆ ಬಂದಿರುತ್ತದೆ. ತನ್ನ ಮಗಳು ದೇಶ ಕಾದ ಯೋಧನ ಹೆಂಡತಿ ಅದರಲ್ಲೂ ವಿಧವೆಯಾಗಿದ್ದು, ಅವರಿಗೂ ಗೌರವ ಕೊಟ್ಟಿರುವುದಿಲ್ಲ. ತನ್ನ ಮೇಲೆ ಹಲ್ಲೆ ನಡೆದಿರುವುದು ಸತ್ಯವಾಗಿದ್ದು, ಇದಕ್ಕೆಲ್ಲಾ ಮುಖ್ಯ ಕಾರಣ ಶ್ರೀ ವೀರಪ್ಪ ಹೆಚ್.ಸಿ–961 ರವರು ಆಗಿರುತ್ತಾರೆ ಹಾಗೂ ಘಟನೆ ನಡೆದ ಸ್ಥಳದಲ್ಲಿ ಸಿಸಿ ಕ್ಯಾಮೆರಾ ಇದ್ದರೆ ಇದನ್ನು ಪರಿಶೀಲಿಸಬಹುದಾಗಿರುತ್ತದೆಂದು ಹಾಗೂ ತಮ್ಮ ಜಾಗವನ್ನು ಅತಿಕ್ರಮಿಸಿರುವ ಶ್ರೀ ಗಂಗಯ್ಯ ರವರಿಗೆ ಸಹಾಯ ಮಾಡುವ ಉದ್ದೇಶದಿಂದ ತಮಗೆ ಅನ್ಯಾಯ ಮಾಡಿರುತ್ತಾರೆಂದು ಇತ್ಯಾದಿಯಾಗಿ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತಾರೆ.

ತದನಂತರ, ಮೇಲ್ಕಾಣಿಸಿದ ದೂರುದಾರರ ಅಭಿಪ್ರಾಯದ ಬಗ್ಗೆ, ಉಪ ಪೊಲೀಸ್ ಆಯುಕ್ತರು, ಪಶ್ಚಿಮ ವಿಭಾಗ, ಬೆಂಗಳೂರು ರವರ ಸಲ್ಲಿಸುರುವ ವರದಿಯೊಂದಿಗೆ ಸಹಾಯಕ ಪೊಲೀಸ್ ಆಯುಕ್ತರು, ಕೆಂಗೇರಿ ಗೇಟ್ ಉಪವಿಭಾಗ, ಬೆಂಗಳೂರು ರವರ ವರದಿ ಹಾಗೂ ಇನ್ನಿತರೇ ದಾಖಲೆಗಳನ್ನು ಸಲ್ಲಿಸಿದ್ದು, ಮುಂಚಿತವಾಗಿ ನೀಡಿದ ವರದಿ ಹಾಗೂ ಈ ವರದಿಗೂ ಯಾವುದೇ ವ್ಯತ್ಯಾಸ ಕಂಡುಬರದ ಕಾರಣ, ಆಯೋಗದ ತನಿಖಾ ವಿಭಾಗಕ್ಕೆ ಈ ಪ್ರಕರಣದ ಬಗ್ಗೆ ತನಿಖೆ ಮಾಡಲು ನೀಡಿದ್ದು, ಈ ಕೆಳಕಂಡಂತೆ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ:

> "...ದಿನಾಂಕ: 20-06-2017 ರಂದು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಎದುರುದಾರರಾದ ಶ್ರೀ ಗಂಗಯ್ಯ ಎಂಬುವರು ನೀಡಿದ ದೂರಿನ ಮೇರೆಗೆ ದಾಖಲಾದ ಠಾಣಾ ಎನ್.ಸಿ.ಆರ್ ನಂ.676/2017ರ ವಿಚಾರದಲ್ಲಿ ಠಾಣಾ ಎಸ್‌ಹೆಚ್‌ಓ ರವರಾದ ಶ್ರೀ ದುರ್ಗರಾಜು ರವರು ಶ್ರೀಮತಿ ಪುಷ್ಪಲತಾ ರವರಿಗೆ ವಿಚಾರಣೆಗಾಗಿ ಠಾಣೆಗೆ ಹಾಜರಾಗಲು ತಿಳಿಸಿ ಬರುವಂತೆ ಠಾಣಾ ಸಿಬ್ಬಂದಿ ಶ್ರೀ ವೀರಯ್ಯ ರವರನ್ನು ಪುಷ್ಪಲತಾ ರವರ ಮನೆಗೆ ಕಳುಹಿಸಿ ಕೊಟ್ಟಿದ್ದು, ಅದರಂತೆ ಸದರಿಯವರು ಎದುರುದಾರರಾದ ಶ್ರೀಮತಿ ಪುಷ್ಪಲತಾ ರವರ ಮನೆಯ ಬಳಿ ಹೋಗಿ ಸದರಿಯವರಿಗೆ ದೂರಿನ ವಿಚಾರವನ್ನು ತಿಳಿಸಿ, ವಿಚಾರಣೆಗಾಗಿ ಠಾಣೆಗೆ ಬರಲು ತಿಳಿಸಿ ಬಂದಿರುತ್ತಾರೆ. ನಂತರ ಅರ್ಜಿದಾರರಾದ ಶ್ರೀ ಸಿ.ಸಿ ಸಿದ್ದಯ್ಯ ರವರು ಅವರ ಮಗಳು ಶ್ರೀಮತಿ ಪುಷ್ಪಲತಾ ಮತ್ತು ಮಗ ಶ್ರೀ ಯೋಗೀಶ್ ರವರೊಂದಿಗೆ ಠಾಣೆಗೆ ಬಂದಿದ್ದು, ನಂತರ ವಿಚಾರಣಾ ಸಮಯದಲ್ಲಿ ಅರ್ಜಿದಾರರಾದ ಶ್ರೀ ಸಿ.ಸಿ ಸಿದ್ದಯ್ಯ ರವರು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಕೂಗಾಡಿ ಅಶಿಸ್ತಿನಿಂದ ವರ್ತಿಸಿರುವುದು ನಂತರ ಪಿಐ ಶ್ರೀ ಹರೀಶ್‌ರವರಿಗೆ ಈ ಬಗ್ಗೆ ಕ್ಷಮಾಪಣೆ ಕೋರಿ ಪತ್ರ ನೀಡಿರುವುದು ಮತ್ತು ಪಿಐ ಶ್ರೀ ಹರೀಶ್ ರವರು ಅರ್ಜಿದಾರರಿಗೆ ದೂರಿನ ವಿಚಾರದ ಕುರಿತು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಹಿಂಬರಹ ನೀಡಿ ಅರ್ಜಿದಾರರನ್ನು ಅದೇ ದಿನ ಸಂಜೆ 04-00 ಗಂಟೆಗೆ ಠಾಣೆಯಿಂದ ಕಳುಹಿಸಿಕೊಟ್ಟಿರುವುದು ವಿಚಾರಣಾ ಕಾಲದಲ್ಲಿ ಪಡೆದ ಹೇಳಿಕೆ ಹಾಗೂ ದಾಖಲಾತಿಗಳಿಂದ ಕಂಡು ಬಂದಿರುತ್ತದೆ. ಅರ್ಜಿದಾರರಾದ ಶ್ರೀ ಸಿದ್ದಯ್ಯ ರವರು ತಮ್ಮ ಮೇಲೆ ಹಲ್ಲೆ ನಡೆಸಿರುವ ಬಗ್ಗೆ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯ ಸಿಸಿಟಿವಿ ಹಾಜರುಪಡಿಸುವಂತೆ ಪಿಐ ಸೂಚಿಸಲಾಗಿ ಸದರಿಯವರು ಸಿಸಿಟಿವಿ ಫೂಟೇಜನ್ನು ಅಳವಡಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ."

ಡಿವೈ ಎಸ್.ಪಿ ರವರ ಅಭಿಪ್ರಾಯವನ್ನು ಪರಿಶೀಲಿಸಲಾಗಿ, ದೂರುದಾರರ ಮೇಲೆ ಯಾವ ಆಧಾರದ ಮೇಲೆ ಅಸಂಜ್ಞೇಯ ಪ್ರಕರಣದಲ್ಲಿ ತನಿಖೆ ಕೈಗೊಳ್ಳಲಾಗಿದೆ ಹಾಗೂ ದೂರುದಾರರಾದ ಶ್ರೀ ಸಿ.ಸಿ ಸಿದ್ದಯ್ಯ ರವರ ಮೇಲೆ ಹಲ್ಲೆ ಮಾಡಿರುವುದು ಕಾನೂನು ಬಾಹಿರವಾಗಿದ್ದು, ಇದರ ಬಗ್ಗೆ ಸಮಜಾಯಿಷಿ ನೀಡಲು, ಕಲಂ 16ರ ಮಾನವ ಹಕ್ಕುಗಳ ರಕ್ಷಣಾ ಕಾಯ್ದೆ 1993 ರ ಅಡಿಯಲ್ಲಿ ಅಂದಿನ

ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಯ 1) ಶ್ರೀ ಹರೀಶ್ ಪಿ.ಐ, 2) ಶ್ರೀ ಕಿರಣ್ ಪಿ.ಎಸ್.ಐ, 3) ಶ್ರೀ ದುರ್ಗರಾಜ್ ಎ.ಎಸ್.ಐ(ಹಾಲಿ ನಿವೃತ್ತ), 4) ಶ್ರೀ ವೀರಪ್ಪ ಎನ್.ಆರ್, ಹೆಡ್ ಕಾನ್ಸ್‌ಟೇಬಲ್(ಹಾಲಿ ನಿವೃತ್ತ) ರವರುಗಳಿಗೆ ನೋಟೀಸ್ ಜಾರಿ ಮಾಡಲಾಗಿದ್ದು, ಮೇಲೆ ಹೇಳಲಾಗಿರುವ ಪೊಲೀಸ್ ಅಧಿಕಾರಿಗಳು ಹಾಗೂ ದೂರುದಾರರು ಅವರ ಹೇಳಿಕೆಗಳನ್ನು ಆಯೋಗದ ಮುಂದೆ ನೀಡಿರುತ್ತಾರೆ.

<u>ದಿನಾಂಕ 29-10-2020 ರಂದು, ಶ್ರೀ ಸಿ.ಸಿ. ಸಿದ್ದಯ್ಯ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಈ ಕೆಳಕಂಡಂತೆ ಇದೆ:</u>

> **"ನಾನು ಮೇಲ್ಕಂಡ ವಿಳಾಸದಲ್ಲಿ ಸುಮಾರು 20 ವರ್ಷಗಳಿಂದ ನನ್ನ ಹೆಂಡತಿ ಮಕ್ಕಳೊಂದಿಗೆ ವಾಸವಾಗಿರುತ್ತೇನೆ. ದಿನಾಂಕ.20.06.2017 ರಂದು ಬೆಳಿಗ್ಗೆ ಸುಮಾರು 8-8.30 ಗಂಟೆಗೆ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯ ಶ್ರೀ ವೀರಪ್ಪ ಎಂಬ ದಫೇದರ್ ರವರು ನನಗೆ ದೂರವಾಣಿ ಕರೆ ಮಾಡಿ ಜಾಗದ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಲು ನೀನು, ನಿನ್ನ ಹೆಂಡತಿ, ಮಗ, ಮಗಳು ಮತ್ತು ಮೊಮ್ಮಗನನ್ನು ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಗೆ ಬರುವಂತೆ ತಿಳಿಸಿದರು. ಅದರಂತೆ ಬೆಳಿಗ್ಗೆ 9.30 ಗಂಟೆಗೆ ನಾನು ನನ್ನ ಹೆಂಡತಿ, ಮಗ, ಮಗಳು ಮತ್ತು ನನ್ನ ಮೊಮ್ಮಗ ಹೋದೆವು. ಆಗ ಠಾಣೆಯ ಮುಂಭಾಗದ ಟೇಬಲ್‌ನಲ್ಲಿ ಕುಳಿತಿದ್ದ ಎಸ್.ಹೆಚ್.ಓ ಶ್ರೀ ದುರ್ಗರಾಜ್ ರವರು ನಮ್ಮ ಬಳಿ ಇದ್ದ ಮೊಬೈಲ್ ಫೋನ್‌ಗಳನ್ನು ತೆಗೆದುಕೊಂಡು ನಂತರ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಹರೀಶ್ ರವರು ಇದ್ದ ಕೊಠಡಿಗೆ ಎದುರುದಾರರಾದ ಶ್ರೀ ಗಂಗಯ್ಯ ಮತ್ತು ನಮ್ಮೆಲ್ಲರನ್ನು ಕಳುಹಿಸಿದರು. ಅಲ್ಲಿ ಶ್ರೀ ಕಿರಣ್ ಪಿ.ಎಸ್.ಐ, ಶ್ರೀ ವೀರಪ್ಪ ದಫೇದಾರ್, ಶ್ರೀ ದುರ್ಗರಾಜ್ ಎ.ಎಸ್.ಐ ಮತ್ತು ಮತ್ತೊಬ್ಬ ಕ್ರೈಂ ನವರು ಇದ್ದರು. ನಂತರ ಶ್ರೀ ಹರೀಶ್ ರವರು ನನ್ನನ್ನು ಮತ್ತು ಶ್ರೀ ಗಂಗಯ್ಯ ನವರನ್ನು ಬಿಟ್ಟು, ನನ್ನ ಹೆಂಡತಿ ಮತ್ತು ಮಕ್ಕಳನ್ನು ಹೊರಗೆ ಕಳುಹಿಸಿದರು. ನಂತರ ಶ್ರೀ ಹರೀಶ್ ರವರು ನನಗೆ ಏನೋ ಸೂಳೆ ಮಗನೆ, ಏನು ಕಾಮಾಕ್ಷಿ ಪಾಳ್ಯ ನಿಮ್ಮಪ್ಪನದ, ಜಮೀನು ನಿಮ್ಮಪ್ಪನದ ಎಂದು ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದಾಗ ನಾನು ಇದನ್ನು ಕೇಳಲಾರದೆ ಪಿ.ಐ ರವರಿಗೆ ಇದು ಸಿವಿಲ್ ವಿಚಾರವಾಗಿರುವುದರಿಂದ ಈ ವಿಚಾರವನ್ನು ಸಿವಿಲ್ ಕೋರ್ಟ್‌ನಲ್ಲಿ ಬಗೆಹರಿಸಿಕೊಳ್ಳುತ್ತೇವೆ ಇದನ್ನು ಕೋರ್ಟ್‌ಗೆ ವಹಿಸಿಕೊಡುವಂತೆ ಕೇಳಿಕೊಂಡೆನು. ಆದರೆ ಇನ್ಸ್‌ಪೆಕ್ಟರ್ ಶ್ರೀ ಹರೀಶ್ ರವರು ನನಗೆ ಅವಹೇಳನಕಾರಿಯಾಗಿ ಬೈಯ್ಯುತ್ತಿದ್ದಾಗ ನಾನು ಹೊರಗೆ ಬರಲು ಹೊರಟಾಗ ಶ್ರೀ ಕಿರಣ್ ಪಿ.ಎಸ್.ಐ ರವರು ನನ್ನ ಎಡ ಕಪಾಳಕ್ಕೆ ಜೋರಾಗಿ ಹೊಡೆದರು. ತದನಂತರ ಶ್ರೀ ಹರೀಶ್ ಸರ್ ರವರು ಈ ಸೂಳೆ ಮಕ್ಕಳಿಗೆ ಬೂಟ್ ಕಾಲಿನಿಂದ ಹೊಡೆಯಿರಿ ಎಂದು ಶ್ರೀ ಕಿರಣ್ ಪಿ.ಎಸ್.ಐ, ಶ್ರೀ ದುರ್ಗರಾಜ್ ಎ.ಎಸ್.ಐ, ಶ್ರೀ ವೀರಪ್ಪ ದಫೇದಾರ್ ಮತ್ತು ಮತ್ತೊಬ್ಬ ಕ್ರೈಂ ನವರಿಗೆ ಹೇಳಿದರು. ಆಗ ಶ್ರೀ ಕಿರಣ್ ರವರು ಮತ್ತು ಅಲ್ಲಿದ್ದ ಇನ್ನು 3 ಪೊಲೀಸರು ಪುನ: ನನ್ನ ಕೊರಳ ಪಟ್ಟಿ ಹಿಡಿದು ಕುತ್ತಿಗೆಗೆ**

**ಹೊಡೆದುಕೊಂಡು ಬೂಟ್ ಕಾಲಿನಿಂದ ಒದ್ದು ಹಲ್ಲೆ ಮಾಡಿದಾಗ ನಾನು ಅಲ್ಲೆ ಪ್ರಜ್ಞೆ ತಪ್ಪಿ ಬಿದ್ದೆ. ನಂತರ ಯಾರೋ ನೀರು ಹಾಕಿದಾಗ ನನಗೆ ಎಚ್ಚರವಾಯಿತು. ಅಷ್ಟರಲ್ಲಿ ಒಂದು ಫೋನ್ ಬಂತು ಆಗ ಶ್ರೀ ಹರೀಶ್ ರವರು ನನ್ನನ್ನು ಪುನ: ಅವರ ಕೊಠಡಿಗೆ ಕರೆಯಿಸಿ ನೀವು ನನ್ನ ತಂದೆ ತರ ಇದೀರಿ ಎಂದು ಸಮಾಧಾನ ಪಡಿಸಿ ಕಳುಹಿಸಿದರು. ನಾನು ಹೊರಗೆ ಬಂದೆ.**

**ನಂತರ ಅಲ್ಲೆ ಕೊಠಡಿಯಿಂದ ಹೊರಗೆ ಬಂದ ನಂತರ ಎಸ್.ಹೆಚ್.ಓ ಶ್ರೀ ದುರ್ಗರಾಜ್ ರವರು ನಾನು ಏನು ಬರೆಯಬೇಕು ಎಂದು ಹೇಳುತ್ತೇನೋ ಅದನ್ನು ಬರೆಯಬೇಕೆಂದು ಹೇಳಿ ನನಗೆ ಬಿ.ಪಿ, ಶುಗರ್ ಖಾಯಿಲೆ ಎಂದು ಬಲವಂತವಾಗಿ ನನ್ನ ಕೈಯಲ್ಲಿ ಬರೆಯಿಸಿಕೊಂಡರು. ಬರೆಯಲಿಲ್ಲವೆಂದರೆ ಜೈಲಿಗೆ ಕಳುಹಿಸುತ್ತೇನೆ ಎಂದು ಬೆದರಿಕೆ ಹಾಕಿದರು. ಆದರೆ ನನಗೆ ಯಾವ ಬಿ.ಪಿ ಮತ್ತು ಶುಗರ್ ಖಾಯಿಲೆ ಇಲ್ಲ.**

ಶ್ರೀ ಹೆಚ್.ಎಸ್. ದುರ್ಗರಾಜ್, ಎ.ಎಸ್.ಐ. ರವರು ಎ.ಸಿ.ಪಿ, ವಿಜಯನಗರ ಉಪವಿಭಾಗ, ಬೆಂಗಳೂರು ರವರ ಮುಂದೆ ನೀಡಿರುವ ಹೇಳಿಕೆಯ ಸಂಬಂಧಿತ ಪ್ಯಾರಾ ಈ ಕೆಳಕಂಡಂತೆ ಇದೆ:

"ದಿನಾಂಕ 20-06-017 ರಂದು ಪೊಲೀಸ್ ಠಾಣೆಯಲ್ಲಿ ಹಗಲು ಕರ್ತವ್ಯ ನಿರ್ವಹಿಸಿಕೊಂಡಿರುವಾಗ ಮದ್ಯಾಹ್ನ ಶ್ರೀ ಆರ್. ಗಂಗಯ್ಯ ಎಂಬುವರು ಠಾಣೆಗೆ ಹಾಜರಾಗಿ ತಮ್ಮ ಮನೆಯ ಬಳಿ ಛೇಂಬರ್ ಪೈಪ್ ಹಾಕಿಸಲು ಹೋದಾಗ, ಪಕ್ಕದ ಮನೆಯಲ್ಲಿರುವ ಶ್ರೀ ಸಿದ್ದಯ್ಯರವರ ಮಗಳು ಶ್ರೀಮತಿ ಪುಷ್ಪಲತಾ ಮತ್ತು ಅವರ ಮಗ ಯೋಗೇಶ್ ಮತ್ತು ಮೊಮ್ಮಗ ಕುಶಾಲ್ ರವರುಗಳು ಬಂದು ಜಗಳ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿರುತ್ತಾರೆ ಹಾಗೂ ಛೇಂಬರ್ ಪೈಪ್ ಹಾಕಲು ಬಿಟ್ಟಿರುವುದಿಲ್ಲ. ಅವರನ್ನು ಠಾಣೆಗೆ ಕರೆಸಿ ಸೂಕ್ತ ತಿಳುವಳಿಕೆ ನೀಡಬೇಕೆಂದು ಕೋರಿ ಕೊಟ್ಟ ದೂರನ್ನು ಪಡೆದು ಠಾಣಾ ಎನ್.ಸಿ.ಆರ್ ನಂ 676/17 ರಲ್ಲಿ ನಮೂದಿಸಿಕೊಂಡಿರುತ್ತದೆ. ನಂತರ ಪ್ರತಿವಾದಿಗಳಾದ ಸಿ.ಸಿ. ಸಿದ್ದಯ್ಯ ಶ್ರೀಮತಿ ಪುಷ್ಪಲತಾ, ಯೋಗೇಶ್ ರವರುಗಳ ಕರೆಸಿ ವಿಚಾರಣೆ ಮಾಡಿದಾಗ ಸಿ.ಸಿ. ಸಿದ್ದಯ್ಯ ರವರು ನಾನು ನಿವೃತ್ತ ಎ.ಆರ್.ಎಸ್.ಐ, ಶ್ರೀ ದೇವಗೌಡ ರವರ ಬಳಿ ಗನ್‌ಮ್ಯಾನ್ ಆಗಿದ್ದೆನು, ನನಗೆ ಡಿ.ಜಿ. ಐ.ಜಿ. ಗೊತ್ತು, ಕುಮಾರಣ್ಣ ಗೊತ್ತು, ನಿಮಗೆಲ್ಲಾ ಒಂದು ಸರಿಯಾಗಿ ಬುದ್ದಿ ಕಲಿಸುತ್ತೇನೆ ಎಂದು ಏರುಧ್ವನಿಯಲ್ಲಿ ಮಾತನಾಡಿ ಪೊಲೀಸ್ ಠಾಣೆಯಲ್ಲಿ ಕೂಗಾಡಿ ಅಶಿಸ್ತಿಯಿಂದ ನಡೆದುಕೊಂಡಿರತ್ತಾರೆ. ಸದರಿ ಸಿ.ಸಿ. ಸಿದ್ದಯ್ಯ ರವರು ಇದೇ ರೀತಿ ಪಿ.ಎಸ್.ಐ ಶ್ರೀ ಕಿರಣ್ ಮತ್ತು ಪಿ.ಐ ಶ್ರೀ ಹರೀಶ್ ರವರಿಗೂ ಸಹ ಮಾತನಾಡಿರುತ್ತಾರೆ. ನಂತರ ನಾನು ಪ್ರತಿವಾದಿಗಳಾದ ಸಿ.ಸಿ. ಸಿದ್ದಯ್ಯ ಶ್ರೀಮತಿ ಪುಷ್ಪಲತಾ, ಯೋಗೇಶ್ ರವರುಗಳ ಹೇಳಿಕೆ ಪಡೆದುಕೊಂಡು ಇದು ಸಿವಿಲ್ ವಿಷಯವಾಗಿದ್ದು, ಸಂಬಂಧಪಟ್ಟ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಹಿಂಬರಹವನ್ನು ನೀಡಿ ಎನ್.ಸಿ.ಆರ್. ನಂ 676/17 ದೂರಿನ ವಿಚಾರಣೆಯನ್ನು

ಮುಕ್ತಾಯ ಮಾಡಿರುತ್ತೇನೆ. ನಂತರ ಶ್ರೀ ಸಿ. ಸಿದ್ದಯ್ಯ ರವರು ತನಗೆ ಬಿ.ಪಿ ಖಾಯಿಲೆ ಇದ್ದು, ಅದರಿಂದಾಗಿ ಈ ರೀತಿ ಮೇಲಾಧಿಕಾರಿಗಳಿಗೆ ಏರುಧ್ವನಿಯಲ್ಲಿ ಮಾತನಾಡಿದ್ದು ಅಶಿಸ್ತಿಯಿಂದ ನಡೆದುಕೊಂಡಿದ್ದು ತಪ್ಪಾಗಿದೆ ಇನ್ನು ಮುಂದೆ ಈ ರೀತಿ ಮಾಡುವುದಿಲ್ಲ ಎಂದು ಪತ್ರವನ್ನು ಬರೆದುಕೊಟ್ಟಿರುತ್ತಾರೆ."

ಶ್ರೀ ಹೆಚ್.ಎಸ್. ದುರ್ಗರಾಜ್, ಎ.ಎಸ್.ಐ. (ಹಾಲಿ ನಿವೃತ್ತ), ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯ ಸಂಬಂಧಿತ ಪ್ಯಾರಾ ಈ ಕೆಳಕಂಡಂತೆ ಇದೆ:

**"ದಿನಾಂಕ.20.06.2017 ರಂದು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕಾರ್ಯನಿರ್ವಹಿಸುತ್ತಿದ್ದಾಗ ಹಗಲು ಕರ್ತವ್ಯಕ್ಕಾಗಿ ನೇಮಕವಾಗಿತ್ತು. ಆ ದಿನ ಬೆಳಿಗ್ಗೆ 8.30 ರಿಂದ ರಾತ್ರಿ 8.30 ಗಂಟೆವರೆಗೆ ನಾನು ಎಸ್.ಹೆಚ್.ಓ ಕರ್ತವ್ಯದಲ್ಲಿ ನೇಮಕವಾಗಿತ್ತು. ಅದರಂತೆ ನಾನು ಠಾಣಾ ಉಸ್ತುವಾರಿಯಲ್ಲಿರುವಾಗ್ಗೆ ಮದ್ಯಾಹ್ನ ಸುಮಾರು10.30 11.00 ಗಂಟೆ ಸಮಯದಲ್ಲಿ ಕಂಟ್ರೋಲ್ ರೂಂನಿಂದ ಕಾಮಾಕ್ಷಿಪಾಳ್ಯದಲ್ಲಿರುವ ವೃಷಭಾವತಿ ನಗರ, ಸಣ್ಣಕ್ಕಿಬಯಲಿನ ಒಂದು ಮನೆ ಹತ್ತಿರ ಒಂದು ಸ್ಯಾನಿಟರಿ ಪೈಪ್ ಹಾಕುವ ವಿಚಾರವಾಗಿ ಗಲಾಟೆ ನಡೆಯುತ್ತಿದೆ ನೀವು ತಕ್ಷಣ ಬೀಟ್‌ನಲ್ಲಿ ಗಸ್ತಿನಲ್ಲಿರುವ ಚೀತಾ–268 ರವರಿಗೆ ಸಂದೇಶವನ್ನು ರವಾನಿಸಿ ಸ್ಥಳಕ್ಕೆ ಹೋಗುವಂತೆ ವೈರಲೆಸ್ ಮೇಸೆಜ್ ಬಂತು. ತಕ್ಷಣ ನಾನು ಗಸ್ತು ಬೀಟ್‌ನಲಿದ್ದ ಹೆಚ್.ಸಿ.961 ಶ್ರೀ ವೀರಪ್ಪ ನವರಿಗೆ ನೀವು ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ ಯಾವ ವಿಚಾರಕ್ಕಾಗಿ ಗಲಾಟೆ ನಡೆಯುತ್ತಿದೆ. ಹಾಗೂ ಅಲ್ಲಿ ಯಾವುದೇ ಅಹಿತರ ಘಟನೆಗಳು ನಡೆಯದಂತೆ ನೋಡಿಕೊಂಡು ಮುಂದಿನ ಕ್ರಮಕ್ಕಾಗಿ ಠಾಣೆಗೆ ಬಂದು ಮಾಹಿತಿ ನೀಡುವಂತೆ ವಾಕಿಟಾಕಿ ಮುಖಾಂತರ ತಿಳಿಸಿದೆ."**

ಶ್ರೀ ವೀರಪ್ಪ ಹೆಚ್.ಸಿ–961 ರವರು ಎ.ಸಿ.ಪಿ, ವಿಜಯನಗರ ಉಪವಿಭಾಗ, ಬೆಂಗಳೂರು ರವರ ಮುಂದೆ ನೀಡಿರುವ ಹೇಳಿಕೆಯ ಸಂಬಂಧಿತ ಪ್ಯಾರಾ ಈ ಕೆಳಕಂಡಂತೆ ಇದೆ:

"......ದುರ್ಗರಾಜ್‌ರವರು ಪ್ರತಿವಾದಿಗಳಾದ ಸಿ.ಸಿ. ಸಿದ್ದಯ್ಯ ಶ್ರೀಮತಿ ಪುಷ್ಪಲತಾ, ಯೋಗೇಶ್ ರವರುಗಳನ್ನು ವಿಚಾರಣೆ ಸಂಬಂಧ ಕರೆ ತಂದು ಹಾಜರುಪಡಿಸುವಂತೆ ನೋಟೀಸ್ ನೀಡಿ ಕಳುಹಿಸಿದ್ದು ಅದರಂತೆ ನಾನು ಮೇಲ್ಕಂಡವರಿಗೆ ನೋಟೀಸ್ ನೀಡಿ ಬಂದಿದ್ದು ನಂತರ ಬಂದ ಅರ್ಜಿದಾರರಾದ ಶ್ರೀ. ಸಿ.ಸಿ. ಸಿದ್ದಯ್ಯ ರವರು ನಾನು ನಿವೃತ್ತ ಎ.ಆರ್.ಎಸ್.ಐ. ಶ್ರೀ ದೇವೇಗೌಡ ರವರ ಬಳಿ ಗನ್ ಮ್ಯಾನ್ ಆಗಿದ್ದೇನು, ನನಗೆ ಡಿ.ಜಿ. ಐ.ಜಿ. ಗೊತ್ತು, ಕುಮಾರಣ್ಣ ಗೊತ್ತು, ನಿಮಗೆಲ್ಲಾ ಒಂದು ಸರಿಯಾಗಿ ಬುದ್ದಿ ಕಲಿಸುತ್ತೇನೆ ಎಂದು ಏರುಧ್ವನಿಯಲ್ಲಿ ಮಾತನಾಡಿ ಪೊಲೀಸ್ ಠಾಣೆಯಲ್ಲಿ ಕೂಗಾಡಿ ಅಶಿಸ್ತಿಯಿಂದ ನಡೆದುಕೊಂಡಿರುತ್ತಾರೆ....."

ಶ್ರೀ ವೀರಪ್ಪ ಹೆಚ್.ಸಿ–961 (ಹಾಲಿ ನಿವೃತ್ತ), ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯ ಸಂಬಂಧಿತ ಪ್ಯಾರಾ ಈ ಕೆಳಕಂಡಂತೆ ಇದೆ:

> **"ನಾನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ದಿನಾಂಕ.20.06.2017 ರಂದು ನಾನು ಹಗಲು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಠಾಣಾ ಎಸ್.ಹೆಚ್.ಓ ರವರು ನನಗೆ ಚೀತಾ 268 ರಲ್ಲಿ ಗಸ್ತು ಕರ್ತವ್ಯಕ್ಕೆ ನೇಮಕ ಮಾಡಿರುತ್ತಾರೆ. ಅದರಂತೆ ನಾನು ಸರಹದ್ದು ಗಸ್ತಿನಲ್ಲಿರುವಾಗ್ಗೆ ಠಾಣಾ ಎಸ್.ಹೆಚ್.ಓ ರವರಾದ ಶ್ರೀ ಎ.ಎಸ್.ಐ ಶ್ರೀ ದುರ್ಗರಾಜ್ ರವರು ಬೆಳಿಗ್ಗೆ ಸುಮಾರು 10.30 11.00 ಗಂಟೆಗೆ ಫೋನ್ ಮಾಡಿ ಠಾಣೆಗೆ ಬರಲು ತಿಳಿಸಿದರು. ನಂತರ ನಾನು ಠಾಣೆಗೆ ಹೋದಾಗ ಎನ್.ಸಿ.ಆರ್ ನಂ.676/2017 ರ ದೂರುದಾರರಾದ ಶ್ರೀ ಗಂಗಯ್ಯ ನವರು ಠಾಣೆಗೆ ಹಾಜರಾಗಿ ತಮ್ಮ ಮನೆಯ ಬಳಿ ಛೇಂಬರ್ ಪೈಪ್ ಹಾಕಿಸಲು ಹೋದಾಗ ಅವರ ಪಕ್ಕದ ಮನೆಯಲ್ಲಿರುವ ಶ್ರೀ ಸಿದ್ದಯ್ಯ ಎಂಬುವವರ ಮಗಳು ಶ್ರೀಮತಿ ಪುಷ್ಪಲತಾ, ಯೋಗೇಶ್ ಮತ್ತು ಅವರ ಮೊಮ್ಮಗ ಕುಶಾಲ್ ಎಂಬುವವರು ಗಲಾಟೆ ಮಾಡಿ ಪೈಪ್ ಹಾಕಲು ಬಿಟ್ಟಿರುವುದಿಲ್ಲವೆಂದು ವಿಷಯ ತಿಳಿಸಿದ್ದು, ಅದರಂತೆ ನಾನು ಶ್ರೀ ಸಿದ್ದಯ್ಯನವರ ಮಗಳು ಶ್ರೀಮತಿ ಪುಷ್ಪಲತ ಅವರ ಮನೆ ಬಳಿ ಹೋಗಿದ್ದು, ಅಲ್ಲಿ ಶ್ರೀಮತಿ ಪುಷ್ಪಲತ ರವರು ಇದ್ದರು ಅವರಿಗೆ ನಾನು ಇಲ್ಲಿ ಏನು ಗಲಾಟೆ ನಡಯುತ್ತಿದೆ ಎಂದು ಕೇಳಿದಾಗ ಪುಷ್ಪಲತ ಅವರು ತನ್ನ ಫೋನ್ ನಿಂದ ಅವರ ತಂದೆ ಶ್ರೀ ಸಿದ್ದಯ್ಯನವರಿಗೆ ಕರೆ ಮಾಡಿ ಕಾಮಾಕ್ಷಿಪಾಳ್ಯ ಠಾಣೆಯಿಂದ ಶ್ರೀ ವೀರಪ್ಪ ಎನ್ನುವ ಪೊಲೀಸ್ ಬಂದಿದ್ದಾರೆ ಅವರ ಹತ್ತಿರ ಮಾತನಾಡಿ ಎಂದು ಫೋನ್ ಅನ್ನು ನನ್ನ ಕೈಯಲ್ಲಿ ಮಾತನಾಡುವಂತೆ ಕೊಟ್ಟರು. ನಾನು ಶ್ರೀ ಸಿದ್ದಯ್ಯನವರಿಗೆ ಇಲ್ಲಿ ಏನು ಗಲಾಟೆ ಮಾಡಿಕೊಳ್ಳಬೇಡಿ, ನಿಮಗೆ ತೊಂದರೆ ಆಗಿರುವ ಬಗ್ಗೆ ಠಾಣೆಗೆ ಬಂದು ದೂರು ಕೊಡುವಂತೆ ತಿಳಿಸಿ ಪುನ: ಫೋನ್ ಅನ್ನು ಅವರ ಮಗಳ ಕೈಯಲ್ಲಿ ಕೊಟ್ಟು, ಠಾಣೆಗೆ ಬಂದು ಎ.ಎಸ್.ಐ ಶ್ರೀ ದುರ್ಗರಾಜ್ ರವರಿಗೆ ಮಾಹಿತಿ ಕೊಟ್ಟು, ನಂತರ ನಾನು ಠಾಣಾ ಸರಹದ್ದು ಗಸ್ತಿಗೆ ಹೋಗಿರುತ್ತೇನೆ."**

ಪ್ರಕರಣದ ದಾಖಲೆಗಳು, ಹೇಳಿಕೆಗಳು, ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ, ಸಹಾಯಕ ಪೋಲೀಸ್ ನಿರೀಕ್ಷಕರಾದ ಶ್ರೀ ದುರ್ಗಪ್ರಸಾದ್ (ಹಾಲಿ ನಿವೃತ್ತ) ರವರು ಅಸಂಜ್ಞೇಯ ಪ್ರಕರಣದಲ್ಲಿ ದೂರುದಾರರನ್ನು ಹಾಗೂ ಅವರ ಕುಟುಂಬದವರನ್ನು ವಿಚಾರಣೆಗಾಗಿ ಕರೆತರಲು ಶ್ರೀ ವೀರಪ್ಪ ಹೆಚ್.ಸಿ–961 (ಹಾಲಿ ನಿವೃತ್ತ) ರವರಿಗೆ ಹೇಳಿ ಕಳುಹಿಸಿದ್ದು, ಶ್ರೀ ವೀರಪ್ಪ ರವರು ದೂರುದಾರರ ಮಗಳಾದ ಪುಷ್ಪಲತಾ ರವರಿಗೆ ಠಾಣೆಗೆ ಬರಬೇಕಾಗಿ ಹೇಳಿದ್ದು, ಅಸಂಜ್ಞೇಯ ಪ್ರಕರಣದಲ್ಲಿ ಪೊಲೀಸ್ ಠಾಣೆಗೆ ಕರೆಸಿ ವಿಚಾರಣೆ ಮಾಡಿದ್ದು ಪೊಲೀಸ್ ಅಧಿಕಾರಿಗಳ ಹೇಳಿಕೆಗಳಿಂದ ಕಂಡುಬರುತ್ತದೆ. ಮುಂದುವರೆದು, ಮೇಲೆ ಉಲ್ಲೇಖಿಸಿದ ಶ್ರೀ ದುರ್ಗರಾಜ್ ಹಾಗೂ ಶ್ರೀ ವೀರಪ್ಪ ರವರು ಆಯೋಗದ ಮುಂದೆ ನೀಡಿರುವ

ಹೇಳಿಕೆಯ ಬಗ್ಗೆ ಎ.ಸಿ.ಪಿ, ವಿಜಯನಗರ ಉಪ–ವಿಭಾಗ ಹಾಗೂ ಕೆಂಗೇರಿ ಗೇಟ್ ಉಪ–ವಿಭಾಗ ರವರ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ. ಮುಂದುವರೆದು, ಪೊಲೀಸ್ ಅಧಿಕಾರಿಗಳಾದ ಅಂದಿನ 1) ಶ್ರೀ ಹರೀಶ್ ಪಿ.ಐ, 2) ಶ್ರೀ ಕಿರಣ್ ಪಿ.ಎಸ್.ಐ, 3) ಶ್ರೀ ದುರ್ಗರಾಜ್ ಎ.ಎಸ್.ಐ (ಹಾಲಿ ನಿವೃತ್ತ), 4) ಶ್ರೀ ವೀರಪ್ಪ ಎನ್.ಆರ್, ಹೆಡ್ ಕಾನ್ಸ್‌ಸ್ಟೇಬಲ್(ಹಾಲಿ ನಿವೃತ್ತ) ರವರುಗಳು ದೂರುದಾರರಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿ ಹಾಗೂ ಅವರ ಮೇಲೆ ಹಲ್ಲೆ ನಡೆಸಿಲ್ಲ ಎಂಬುವುದಕ್ಕೆ ಅವರ ಹೇಳಿಕೆಗಳನ್ನು ಹೊರತುಪಡಿಸಿ ಇನ್ನಾವುದೇ (ಸಿ.ಸಿ.ಟಿ.ವಿ ಫೂಟೇಜ್) ಸಾಕ್ಷ್ಯಾಧಾರಗಳನ್ನು ಒದಗಿಸಿರುವುದಿಲ್ಲ. ಹಾಗೂ ದೂರುದಾರರಾದ ಶ್ರೀ ಸಿ.ಸಿ. ಸಿದ್ದಯ್ಯ, ಅವರ ಮಕ್ಕಳಾದ ಪುಷ್ಪಲತಾ ಹಾಗೂ ಯೋಗೀಶ್ ರವರ ಹೇಳಿಕೆಗಳು ಹಾಗೂ ಶ್ರೀ ಸಿ.ಸಿ ಸಿದ್ದಯ್ಯ ರವರು ಸಲ್ಲಿಸಿರುವ ವೈದ್ಯಕೀಯ ವರದಿ ಹಾಗೂ ವೈದ್ಯರು ನೀಡಿರುವ ಔಷಧ ಚೀಟಿಯಲ್ಲಿ ದೂರುದಾರರ ಮೇಲೆ ಪೊಲೀಸ್ ಠಾಣೆಯಲ್ಲಿ ದೈಹಿಕ ಹಲ್ಲೆ ಮಾಡಿರುವುದಾಗಿ ಸ್ಪಷ್ಟವಾಗಿ ತಿಳಿದು ಬರುತ್ತದೆ. ದಂಡ ಪ್ರಕ್ರಿಯಾ ಸಂಹಿತೆ, 1973 ರ ಕಲಂ 155 (2)ರ ಪ್ರಕಾರ ಯಾವ ಪೊಲೀಸ್ ಅಧಿಕಾರಿಯೂ ಒಂದು ಅಸಂಜ್ಞೇಯ ಮೊಕದ್ದಮೆಯನ್ನು ಅಂತಹ ಮೊಕದ್ದಮೆಯನ್ನು ವಿಚಾರಣೆ ಮಾಡಲು ಅಥವಾ ಆರೋಪ ವಿಚಾರಣೆಗೆ ಗುರಿಪಡಿಸಲು ಅಧಿಕಾರ ಹೊಂದಿರುವ ಮ್ಯಾಜಿಸ್ಟ್ರೇಟ್‌ನ ಆದೇಶವಿಲ್ಲದೆ ತನಿಖೆ ಮಾಡತಕ್ಕದ್ದಲ್ಲವೆಂದು ಹೇಳಲಾಗಿದೆ. ಆದರೆ ಶ್ರೀ ದುರ್ಗರಾಜ್ ಎ.ಎಸ್.ಐ (ಹಾಲಿ ನಿವೃತ್ತ) ರವರು ಅಸಂಜ್ಞೇಯ ಪ್ರಕರಣದಲ್ಲಿ ದೂರುದಾರರನ್ನು ಹಾಗೂ ಅವರ ಕುಟುಂಬದವರನ್ನು ವಿಚಾರಣೆಗಾಗಿ ಪೊಲೀಸ್ ಠಾಣೆಗೆ ಬರಲು ಶ್ರೀ ವೀರಪ್ಪ ಹೆಚ್.ಸಿ–961 (ಹಾಲಿ ನಿವೃತ್ತ) ರವರ ಮೂಲಕ ಹೇಳಿ ಕರೆಸಿ, ವಿಚಾರಣೆ ಮಾಡಿ ಹಾಗೂ ಮೇಲ್ಕಂಡ ಪೊಲೀಸ್ ಅಧಿಕಾರಿಗಳು ದೂರುದಾರರಾದ ಶ್ರೀ ಸಿ.ಸಿ. ಸಿದ್ದಯ್ಯ ರವರನ್ನು ಠಾಣೆಯಲ್ಲಿ ಅವಾಚ್ಯ ಶಬ್ಧಗಳಿಂದ ನಿಂದಿಸಿ ಹಾಗೂ ಅವರ ಮೇಲೆ ಹಲ್ಲೆ ಮಾಡಿರುತ್ತಾರೆಂದು ಕಂಡು ಬರುತ್ತದೆ.

<u>ಮೇಲೆ ತಿಳಿಸಲಾದ ಕಾರಣಗಳಿಂದ, ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ:</u>

1. ಶ್ರೀ ಸಿ.ಸಿ ಸಿದ್ದಯ್ಯ ರವರಿಗೆ *ರೂ. 25,000/– (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಪರಿಹಾರ ರೂಪದಲ್ಲಿ ಒಂದು ತಿಂಗಳೊಳಗಾಗಿ ಸರ್ಕಾರದಿಂದ ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಪ್ರಕರಣದ ಘಟನೆಯ ಬಗ್ಗೆ ಇಲಾಖಾ ವಿಚಾರಣೆಯಾದ ನಂತರ ವಿಚಾರಣೆಯ ತೀರ್ಪಿಗೊಳಪಟ್ಟು ಅಂದಿನ ಕಾಮಾಕ್ಷಿಪಾಳ್ಯ* ಪೊಲೀಸ್ ಠಾಣೆಯ ಅಧಿಕಾರಿಗಳಾದ 1) ಶ್ರೀ ಹರೀಶ್.ಎಂ.ಆರ್, ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್, ಸಿಸಿಬಿ 2) ಶ್ರೀ ಕಿರಣ್.ವಿ, ಹಾಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆ 3) ಶ್ರೀ ಹೆಚ್.ಎಸ್

ದುರ್ಗರಾಜ್ ಎ.ಎಸ್.ಐ (ಹಾಲಿ ನಿವೃತ್ತ), 4) ಶ್ರೀ ವೀರಪ್ಪ ಎನ್.ಆರ್, ಹೆಡ್ ಕಾನ್ಸ್‌ಸ್ಟೇಬಲ್ (ಹಾಲಿ ನಿವೃತ್ತ ಎ.ಎಸ್.ಐ) *ರವರುಗಳ ವೇತನದಿಂದ ಅಥವಾ ನಿವೃತ್ತಿ ವೇತನದಿಂದ ಸಮನಾಗಿ ಪರಿಹಾರ ನೀಡಿದ ಹಣವನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸತಕ್ಕದ್ದು.*

ಶ್ರೀ ಹೆಚ್.ಎಸ್ ದುರ್ಗರಾಜ್ ಎ.ಎಸ್.ಐ (ಹಾಲಿ ನಿವೃತ್ತ) ಹಾಗೂ ಶ್ರೀ ವೀರಪ್ಪ ಎನ್.ಆರ್, ಹೆಡ್ ಕಾನ್ಸ್‌ಸ್ಟೇಬಲ್ (ಹಾಲಿ ನಿವೃತ್ತ ಎ.ಎಸ್.ಐ) *ರವರುಗಳು ನಿವೃತ್ತಿ ಹೊಂದಿರುವ ಕಾರಣದಿಂದಾಗಿ ಇಲಾಖಾ ವಿಚಾರಣೆ ಮಾಡಲು* ***Karnataka Civil Services Rules*** *ರ ಅಡಿಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬಹುದು.*

2. *ಪೊಲೀಸರ ಅಧಿಕಾರ ದುರುಪಯೋಗದಂತಹ ಘಟನೆಗಳು ಮರುಗಳಿಕೆಯನ್ನು ತಡೆಗಟ್ಟುವ ಸಲುವಾಗಿ ಪೊಲೀಸ್ ಠಾಣೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮಾರಗಳನ್ನು ಅಳವಡಿಸುವುದು ಅವಶ್ಯಕತೆ ಇದೆ. ಈ ಆದೇಶದ ಪ್ರತಿಯನ್ನು ಕರ್ನಾಟಕ ಸರ್ಕಾರದ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.*

ಆದೇಶದ ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2007 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ. 12-03-2021 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/
(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್.